## ಕರ್ನಾಟಕ ಸರ್ಕಾರ

ಸಂಖ್ಯೆ: RDPR/29/GPA/2022

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು ದಿನಾಂಕ:15-07-2022.

## ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ ಪ್ರಕರಣಗಳಾದ 315 ಮತ್ತು 64 ರೊಂದಿಗೆ ಓದಿಕೊಂಡಂತೆ ಪ್ರಕರಣ 316 ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯತ್‌ಗಳ, ತಾಲ್ಲೂಕು ಪಂಚಾಯತ್‌ಗಳ ಮತ್ತು ಗ್ರಾಮ ಪಂಚಾಯತ್‌ಗಳ ನಿಯಂತ್ರಣ) ಮಾದರಿ ಉಪವಿಧಿಗಳು, 2015 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಉದ್ದೇಶಿಸಿರುವ ಕರಡು ಉಪವಿಧಿಗಳನ್ನು ಇದರಿಂದ ಬಾಧಿತರಾಗುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಸದರಿ ಅಧಿನಿಯಮದ ಪ್ರಕರಣ 316ರಲ್ಲಿ ನಿಗದಿಪಡಿಸಿದಂತೆ ಪ್ರಕಟಿಸಲಾಗಿದೆ ಮತ್ತು ಈ ಮೂಲಕ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ, ಸದರಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಮಾದರಿ ಉಪವಿಧಿಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿತವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ.

ಮೇಲೆ ನಿಗದಿಪಡಿಸಿದ ಅವಧಿಯು ಮುಕ್ತಾಯವಾಗುವ ಮೊದಲು ಸದರಿ ಕರಡು ಮಾದರಿ ಉಪವಿಧಿಗಳಿಗೆ ಸಂಬಂಧಿಸಿದಂತೆ ಯಾವೊಬ್ಬ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದ ಆಕ್ಷೇಪಣೆ ಮತ್ತು ಸಲಹೆಗಳನ್ನು, ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆ ಅಥವಾ ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, 3ನೇ ಹಂತ, 3ನೇ ಮಹಡಿ, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು-01, ಇವರಿಗೆ ಕಳುಹಿಸಲು ಕೋರಲಾಗಿದೆ.

### ಕರಡು ಉಪ ವಿಧಿಗಳು

1. **ಹೆಸರು ಮತ್ತು ಪ್ರಾರಂಭ.**- (1) ಈ ಉಪವಿಧಿಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯತ್‌ಗಳ ನಿಯಂತ್ರಣ) (ತಿದ್ದುಪಡಿ) ಮಾದರಿ ಉಪವಿಧಿಗಳು, 2022 ಎಂದು ಕರೆಯತಕ್ಕದ್ದು.

(2) ಇವು ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

**2. 18ನೇ ಉಪವಿಧಿಯ ತಿದ್ದುಪಡಿ.**- ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಗ್ರಾಮ ಪಂಚಾಯತ್‌ಗಳ ನಿಯಂತ್ರಣ) ಮಾದರಿ ಉಪವಿಧಿಗಳು, 2015 ರ 18ನೇ ಉಪವಿಧಿಯ ಖಂಡ (4) ಕ್ಕೆ ಈ ಮುಂದಿನಂತೆ ಪ್ರತಿಯೋಜಿಸತಕ್ಕದ್ದು:-

"(4) **ಕೈಗಾರಿಕಾ ಕಟ್ಟಡಗಳು:** ಕೈಗಾರಿಕಾ ಕಟ್ಟಡಗಳಿಗೆ ಬಿಡಬೇಕಾಗಿರುವ ಖಾಲಿ ಜಾಗದ ಕನಿಷ್ಟ ಅಳತೆಯು,-

i. 255 ಚದರ ಮೀಟರುಗಳವರೆಗಿನ ಪ್ಲಾಟುಗಳಿಗೆ ಸಂಬಂಧಿಸಿದಂತೆ ಮುಂಭಾಗದಲ್ಲಿ 3 ಮೀಟರ್ ಗಳು ಮತ್ತು ಎಡಬದಿ, ಬಲಬದಿ ಹಾಗೂ ಹಿಂಬದಿಯಲ್ಲಿ 1.5 ಮೀಟರ್ ಆಗಿರತಕ್ಕದ್ದು;

ii. 510 ಚದರ ಮೀಟರ್‌ಗಳ ವರೆಗಿನ ಪ್ಲಾಟ್‌ಗಳಿಗೆ ಸಂಬಂಧಿಸಿದಂತೆ ಮುಂಭಾಗದಲ್ಲಿ ಬಿಡಬೇಕಾದ ಖಾಲಿ ಜಾಗದ ಅಳತೆಯು 3 ಮೀಟರ್‌ಗಳು ಮತ್ತು ಎಡಬದಿ, ಬಲಬದಿ ಹಾಗೂ ಹಿಂಬದಿಯಲ್ಲಿ 2.5 ಮೀಟರ್ ಆಗಿರತಕ್ಕದ್ದು;

iii. 1020 ಚದರ ಮೀಟರುಗಳವರೆಗಿನ ಪ್ಲಾಟುಗಳಿಗೆ ಸಂಬಂಧಿಸಿದಂತೆ ಮುಂಭಾಗದಲ್ಲಿ 4.5 ಮೀಟರ್ ಗಳು ಮತ್ತು ಎಡಬದಿ, ಬಲಬದಿ ಹಾಗೂ ಹಿಂಬದಿಯಲ್ಲಿ 3 ಮೀಟರ್ ಆಗಿರತಕ್ಕದ್ದು;

iv. 2025 ಚದರ ಮೀಟರುಗಳವರೆಗಿನ ಪ್ಲಾಟುಗಳಿಗೆ ಸಂಬಂಧಿಸಿದಂತೆ ಮುಂಭಾಗದಲ್ಲಿ 8 ಮೀಟರ್ ಗಳು ಮತ್ತು ಎಡಬದಿ, ಬಲಬದಿ ಹಾಗೂ ಹಿಂಬದಿಯಲ್ಲಿ 4.50 ಮೀಟರ್ ಆಗಿರತಕ್ಕದ್ದು;

v. 4050 ಚದರ ಮೀಟರುಗಳವರೆಗಿನ ಪ್ಲಾಟುಗಳಿಗೆ ಸಂಬಂಧಿಸಿದಂತೆ ಮುಂಭಾಗದಲ್ಲಿ 9 ಮೀಟರ್ ಗಳು ಮತ್ತು ಎಡಬದಿ, ಬಲಬದಿ ಹಾಗೂ ಹಿಂಬದಿಯಲ್ಲಿ 6.00 ಮೀಟರ್ ಆಗಿರತಕ್ಕದ್ದು;

vi. 8100 ಕ್ಕಿಂತ ಚದರ ಮೀಟರ್‌ಗಳಿಗಿಂತ ಹೆಚ್ಚಿನ ವಿಸ್ತಾರದ ಪ್ಲಾಟುಗಳಿಗೆ ಸಂಬಂಧಿಸಿದಂತೆ ಮುಂಭಾಗದಲ್ಲಿ 10 ಮೀಟರ್ ಗಳು ಮತ್ತು ಎಡಬದಿ, ಬಲಬದಿ ಹಾಗೂ ಹಿಂಬದಿಯಲ್ಲಿ 8 ಮೀಟರ್ ಆಗಿರತಕ್ಕದ್ದು;

vii. ಈ ಕಟ್ಟಡಗಳು ಲಿಫ್ಟ್‌ಗಳನ್ನು ಹೊಂದಿಲ್ಲದಿದ್ದರೆ ಅವುಗಳ ಗರಿಷ್ಠ ಎತ್ತರವು 2 ಮಹಡಿಗಳು ಆಗಿರತಕ್ಕದ್ದು;

viii. ಕೈಗಾರಿಕಾ ಕಟ್ಟಡಗಳ ಗರಿಷ್ಠ ಎತ್ತರದ ಅಳತೆಯು 15 ಮೀಟರ್‌ಗಳಾಗಿರತಕ್ಕದ್ದು; ಮತ್ತು

ix. ಇಂತಹ ಎತ್ತರವುಳ್ಳ ಕೈಗಾರಿಕಾ ಕಟ್ಟಡಗಳಿಗೆ ಸಂಬಂಧಿಸಿದಂತೆ ಅನುಮತಿಸಬಹುದಾದ ಗರಿಷ್ಠ ನೆಲದ ವ್ಯಾಪ್ತಿಯು ಶೇ 65 ರಷ್ಟು ಆಗಿರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

B. Naveenkumar 15/7
(ನವೀನ್ ಕುಮಾರ್ ಬಿ.)
ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
15/7/22

**ಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು,

**ಪ್ರತಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.
2. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ಮಾರ್ಗ, ಕೆ.ಜಿ. ರಸ್ತೆ, ಗಾಂಧಿನಗರ, ಬೆಂಗಳೂರು.
3. ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು.
5. ಎಲ್ಲಾ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.
6. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ.
8. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.